FDP.No.:6/2011

R.W.:2

ಈ ದಿನ ದಿಃ 22-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಎದುರದಾರ ಪರ ಶ್ರೀ ಪಿ ಎಸ್ ಜೆ ವಕೀಲರಿಂದಃ

1 ) ಸಾಕ್ಷಿಯು ಗ್ರಾಮ ಆಡಳಿತಧಿಕಾರಿ ಡವಳೇಶ್ವರ ನಂದಗಾಂವ ರವರುನೀಡಿರುವ ದಿಃ 14-10-2024 ರ ದೃಢೀಕರಣವನ್ನು ಹಾಜರು ಪಡಿಸಿದ್ದು ಅದನ್ನು ನಿ ಆರ್ 182 ಎಂದು ಗುರುತಿಸಲಾಯಿತು.

2) ಸಾಕ್ಷಿಯು 10 sugar cane slip ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾರೆ ನಿ ಆರ್ 183 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರ ಪರ ಶ್ರೀ ಎನ್ ಬಿ ಬಿ ವಕೀಲರಿಂದಃ

1) ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಶಿವಪುತ್ರ ಮಹಾಲಿಂಗಪ್ಪ ಲಿಗಾಡೆ ರವರು ಯಾವಾಗ ದಾವೆ ದಾಖಲಿಸಿದ್ದರು ಗೊತ್ತಿಲ್ಲ ಸಾಕ್ಷಿ ಮುಂದುವರೆದು ಗೌಡನವರ ಕಡೆಯಿಂದ ನಾವು ಭೂ ಖರೀದಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಭೂಮಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಲಿಗಾಡೆ ಕುಟುಂಬವರಿಗೆ ಬೆಟಿಯಾಗಿ ಚೌಕಶಿ ಮಾಡಿದ್ದಿರಿ ಎಂದರೆ ಅವರು ಸಂಬಂಧ ಇಲ್ಲ ಗೌಡನವರ ಕುಟುಂಬಕ್ಕೆ ಬೇಟಿಯಾಗಿದ್ದೇನೆ. ನಾನು ಖರೀದಿ ಮಾಡುವ ಪೂರ್ವದಲ್ಲಿ public notice ಕೊಟ್ಟಿರುವುದಿಲ್ಲ. ಸದರಿ ಆಸ್ತಿಯ ಬಗ್ಗೆ ನ್ಯಾಯಾಲಯದಲ್ಲಿ ತಂಟೆ ತಕರಾರು ಇರುವ ಕುರಿತು ನಾನು ಚೌಕಾಶಿ ಮಾಡಿಲ್ಲ.

2) ಪ್ರಸ್ತುತ FDP ದಾಖಲು ಆದ ಮೇಲೆ ನನಗೆ ನ್ಯಾಯಾಲಯದಿಂದ ನೋಟೀಸು ಬಂದಿರುತ್ತದೆ ಎಂದರೆ ಸರಿ. ಸದರಿ ನೋಟಿಸು ಬಂದ ನಂತರ ನಾನು ಹಿರಿಯ ದಿವಾಣಿ ನ್ಯಾಯಾಲಯ ಮುದೋಳ ಅಸಲು ದಾವೆ ನಂಬರ 48/2012 ರಂತೆ ದಾಖಲು ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾವೆಯನ್ನು ನಾನು ಮುಂದುವರೆಸದ ಇದ್ದ ಕಾರಣಕ್ಕೆ ಅದು ವಜಾ ಆಗಿರುತ್ತದೆ ಎಂದರೆ ಚಿಕ್ಕೋಡಿಯಲ್ಲಿ ಎಪ ಡಿ ಪಿ ಇದೆ ಅಲ್ಲಿ ಇತ್ಯರ್ಥ ಮಾಡಿಕೊಳ್ಳಿ ಎಂದು ವಜಾ ಆಗಿರುತ್ತದೆ. ಅದೇ ನ್ಯಾಯಾಲಲಯದಲ್ಲಿ ಅಸಲು ದಾವೆ ನಂಬರ 279/2015 ರಂತೆ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರಸ್ತುತ ಅರ್ಜಿದಾರರು ಪ್ರತಿವಾದ ಪತ್ರ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕರಣ ಎನು ಆಯಿತು ಎಂದು ನನಗೆ ಗೊತ್ತಿಲ್ಲ.

3) ನಾನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರೀಟ್ ಪಿಟಿಶನ ದಾಖಲು ಮಾಡಿರುತ್ತೇನೆ ಎಂದರೆ ಸರಿ. ಅದು ಸಹ ಇತ್ಯರ್ಥ ಗೊಂಡಿರುತ್ತದೆ ಎಂದರೆ ಸರಿ. ಅರ್ಜಿದಾರರ ಪರವಾಗಿ ಆಗಿರುವ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದ Prliliminary decree ಯಾವುದೇ ನ್ಯಾಯಾಲಯದಲ್ಲಿ ರದ್ದು ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರು ತನ್ನ ಪಾಲಿನ ಆಸ್ತಿ ತೆಗೆದುಕೊಳ್ಳಲು ನನ್ನ ತಕರಾರು ಇಲ್ಲ ಎಂದರೆ ನಾವು ಖರೀದಿ ಮಾಡಿದ್ದನ್ನು ಬಿಟ್ಟು ಪಡೆದುಕೊಳ್ಳಬಹುದು. ಲಿಗಾಡೆ

ಕುಟುಂಬಕ್ಕೆ ಸೇರಿದ ಒಟ್ಟು ಆಸ್ತಿಗಳು ಎಷ್ಟು ಇದ್ದವು ಎಂದರೆ ಸರಿ ನಂದಗಾಂವದಲ್ಲಿರುವ 4 ಹೊಲಗಳು ಇದ್ದವು, ನಿಪ್ಪಾಣಿಯ ಕುರಿತು ನನಗೆ ಗೊತ್ತಿಲ್ಲ. ಲಿಗಾಡೆ ಯವರು ಎಷ್ಟು ಜನ ಅಣ್ಣತಮ್ಮಂದಿರು ಎಂದು ನನಗೆ ಗೊತ್ತಿಲ್ಲ. ಗೌಡನವರ ನಮಗೆ ಆಸ್ತಿ ಮಾರುವ ಪೂರ್ವದಲ್ಲಿ ಅಸಲು ದಾವೆ ನಂಬರ 84/1967 ದಾಖಲುಆಗಿತ್ತು ಎಂದರೆ ನಮಗೆ ಆ ಬಗ್ಗೆ ಖರೀದಿ ಮಾಡುವಾಗ ಗೊತ್ತಿರಲಿಲ್ಲ. ಅದರಲ್ಲಿಇರುವ ಪ್ರತಿವಾದಿ ಆರ್ ಎ ನಂಬರ 258/1969 ರಂತೆ ಮೇಲ್ಮನವಿಯಲ್ಲಿ ಸಲ್ಲಿಸಿದ್ದರು ಎಂದರೆ ಆ ಬಗ್ಗೆ ಗೊತ್ತಿಲ್ಲ.

4) ಸದರಿ ಆರ್ ಎ ಮೇಲ್ಮನವಿಯ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ ಎಸ್ ಎ ನಂಬರ 741/2003 ರಂತೆ ದಾಖಲು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಆರ್ ಎ ಮತ್ತು ಆರ್ ಎಸ್ ಎ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

5) ಸರ್ವೆ ನಂಬರ 45 ಮತ್ತು 48 ನಂದಗಾಂವದಲ್ಲಿರುವ ಜಮೀನುಗಳ ಫಲವತ್ತೆಯ ಜಮೀನುಗಳು ಇವೆ ಎಂದರೆ ಸರಿಯಲ್ಲ. ಒಣ ಬೂಮಿವುಗಳು ಇವೆ. ಸದರಿ ಭೂಮಿಯಲ್ಲಿ ಕಬ್ಬಿನ ಬೆಳೆಯನ್ನು ಕಳೆದ 40-45 ವರ್ಷಗಳಿಂದ ಬೆಳೆಯುತ್ತಾರೆ ಎಂದರೆ ಸರಿಯಲ್ಲ. ಈಗ ನಾವು ಖರೀದಿ ಮಾಡಿದ ನಂತರ ಅಭಿವೃದ್ದಿ ಪಡಿಸಿ ಬೆಳೆಯುತ್ತೇವೆ ಎಂದು ನುಡಿಯುತ್ತಾರೆ. ಸದರಿ ಭೂಮಿಯಲ್ಲಿ ಒಂದು ಎಕರೆಗೆ 40-45 ಟನ್ ಕಬ್ಬನ್ನು ಬೆಳೆಯುತ್ತೇವೆ. ಲಿಗಾಡೆ ಕುಟುಂಬಕ್ಕೆ ಸಂಬಂಧಿಸಿದಂತೆ ವ್ಯಜ್ಯ ಇದೆ ಎಂದು ಗೊತ್ತಿದ್ದರೂ ಸಹ ಆ ವ್ಯಜ್ಯಕ್ಕೆ ಸಂಬಂಧಿಸಿದ ಭೂಮಿಯನ್ನು ಖರೀದಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಕರಾರದಲ್ಲಿ ನಮೂದು ಮಾಡಿದ ಸಂಗತಿಗಳು ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಷಯ ಸುಳ್ಳು ಇದೆ ಎಂದರೆ ಸರಿಯಲ್ಲ. ಅರ್ಜಿದಾರಿಗೆ ಆಸ್ತಿ ಸಿಗಬಾರದು ಎಂದು ನಾನು ಪ್ರಕರಣವನ್ನು ಮುಂದುಡುತ್ತಾರೆ ಬರುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಚಿಕ್ಕೋಡಿ.